ಎಂದು, ಅವಳು ಸಹ ತನ್ನ ಎರಡು ಕೈಗಳನ್ನು ಜೋಡಿಸಿ ಆ ಶಿಲೆಗೆ ನಮಿಸಿದಳು. ಅವಳ ಅತ್ತೆಯೂ ಸಹ ಹಾಗೆ ಮಾಡಿದಳು. ಇವಳ ಈ ಕತ್ತಲ ಆ ಕ್ರಿಯೆಗೆ ಆ ಇಬ್ಬರು ಹೆಂಗಸರು ಮತ್ತು ಅವರ ಕಪ್ಪುನಾಯಿ ಸಾಕ್ಷಿಗಳಾಗಿದ್ದವು ರಾತ್ರಿಯಲ್ಲಿ.

ಹೋತ ಈಗ ಇವರ ಮಾತುಗಳನ್ನು ತುಂಬಾ ಗಂಭೀರವಾಗಿ ಕೇಳಿಸಿಕೊಳ್ಳುತ್ತಿರುವಂತೆ ಇವರನ್ನೇ ನೋಡುತ್ತಿದೆ. 'ಎಂತೆಂಥ ಪಂಡಿತರು, ವೈದ್ಯರು ನಾವು ಹೋಗಿರೋದು, ಒಬ್ಬರಾ ಇಬ್ಬರಾ, ಸಂತೆಯಲ್ಲಿರುವ ಗಿಣಿ ಶಾಸ್ತ್ರದವನನ್ನು ಬಿಟ್ಟಿಲ್ಲ ಕಣಮ್ಮೋ, ನೋಡನ ಇನ್ನು ಅಂಥದೇನು ವಯಸ್ಸಾಗಿರೋದು' ಎಂದಳು ಚುಕ್ಕಿ. ಇವಳ ಈ ಮಾತಿಗೆ ಅವಳ ಅಪ್ಪ ಅಮ್ಮ ಏನನ್ನೂ ಹೇಳದೆ ಸುಮ್ಮನೆ ಕೂತಿದ್ದರು. ಪಶ್ಚಿಮದಲ್ಲಿ ಸೂರ್ಯ ಮೆಲ್ಲನೆ ಇಳಿಯಲು ತಯಾರಿ ಮಾಡಿಕೊಳ್ಳುತ್ತಿದ್ದ. ಆಗ ಅವಳ ಗಂಡ ಪ್ರಸಾದ ಬಂದ. ನಲವತ್ತೈದರ ಆಸುಪಾಸಿನ ವಯಸ್ಸು. ಮಸಿಯಷ್ಟು ಕಪ್ಪಾಗಿದ್ದರೂ ನೋಡಲು ಆಕರ್ಷಕ ವ್ಯಕ್ತಿತ್ವ. ಕಪ್ಪಾಗಿದ್ದರೂ ಮುಖದಲ್ಲಿನ ಕಾಂತಿ ಅವನ ಮೈಯ ಕಪ್ಪುಬಣ್ಣವನ್ನು ಮರೆಮಾಚುತ್ತಿತ್ತು. ಓದಿದವನಾಗಿದ್ದರೂ ಅವನ ಆಂಗಿಕ ಭಾವನೆ, ಹೊರ ವ್ಯಕ್ತಿತ್ವ ಅದನ್ನು ತೋರಿಸುತ್ತಿರಲಿಲ್ಲ. ತುಂಬ ಸರಳವಾಗಿ ಕಾಣುತ್ತಿದ್ದ. ಅವನು ಬಂದಾಗ ಅಂಗಳದ ತುಂಬ ಸೇಬು ಮತ್ತು ಮಲ್ಲಿಗೆ ಹೂವಿನ ಪರಿಮಳ ತುಂಬಿಕೊಂಡಿತು. 'ಅಗ, ಅಮೋಯ್ ನಿನ್ನ ಅಳಿಯ

